MVC No.84 /2019 PW-**1**

**ದಿನಾಂಕ 26.08.2022 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು : ಎದುರುದಾರರಾದ ಆರ್ 2 ಪರ ವಕೀಲರಿಂದ :**

ನನ್ನ ಯಜಮಾನರು ವ್ಯವಸಾಯ ಮಾಡುತ್ತಿದ್ದರು. ಅವರು ಲಿಂಗಪಟ್ಟಣ ಗ್ರಾಮದವರು. ಅವರು ಅಪಘಾತವಾದ ದಿನ ಪುಟ್ಟಪ್ಪನದೊಡ್ಡಿ ಗ್ರಾಮಕ್ಕೆ ಹೋಗುತ್ತಾ ಇದ್ದರು. ನನಗೆ ಈ ಅಪಘಾತ ಹೇಗೆ ಆಯಿತು ಎಂದು ನಾನು ನೋಡಿಲ್ಲ. ನನ್ನ ಯಜಮಾನರ ಬಳಿ ಡಿಎಲ್ ಇತ್ತು. ಅದನ್ನು ನ್ಯಾಯಾಲಯಕ್ಕೆ ಕೊಟ್ಟಿರುತ್ತೇನೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ನನ್ನ ಯಜಮಾನರು ದ್ವಿಚಕ್ರ ವಾಹನದಲ್ಲಿ ಹೋಗುವಾಗ ಯಾವುದೇ ಸೂಚನೆಯನ್ನು ಕೊಡದೇ ಎಡಗಡೆಯಿಂದ ಬಲಗಡೆಗೆ ಯೂ ಟರ್ನ್ ನಲ್ಲಿ ತಿರುಗಿದ್ದರಿಂದ ಈ ಅಪಘಾತವಾಗಿದೆ ಎಂದರೆ ಸರಿಯಲ್ಲ. ಮೈಸೂರು - ಬೆಂಗಳೂರು ಹೆದ್ದಾರಿಯಲ್ಲಿ ಪ್ರತಿ ನಿಮಿಷಕ್ಕೂ ವಾಹನಗಳು ಓಡಾಡುತ್ತಿರುತ್ತವೆ ಎಂದರೆ ಸರಿ.ಪುಟ್ಟಪ್ಪನದೊಡ್ಡಿ ಗ್ರಾಮದ ಯೂ ಟರ್ನ್ ನ ಬಳಿ ರಸ್ತೆಯ ಅಕ್ಕ ಪಕ್ಕ ಯಾವುದೇ ಶಾಲೆಗಳು ಆಗಲೀ ಮತ್ತು ದೇವಸ್ಥಾನಗಳು ಆಗಲೀ ಇಲ್ಲ ಎಂದರೆ ಹೌದು. ಸದರಿ ರಸ್ತೆಯಲ್ಲಿ ರಸ್ತೆಯ ಉಬ್ಬುಗಳು (Humps) ಇಲ್ಲ ಎಂದರೆ ಹೌದು. ಬೆಂಗಳೂರಿನಿಂದ ಬರುವ ಬಸ್ಸುಗಳು ಪುಟ್ಟಪ್ಪನದೊಡ್ಡಿ ಮತ್ತು ಮುದುಗೆರೆ ಗ್ರಾಮದಲ್ಲಿ ಯಾವುದೇ ಸ್ಟಾಪ್ ಇಲ್ಲದಿದ್ದರೆ ಬಸ್ಸು ಮಾಮೂಲಿ ವೇಗವಾಗಿ ಹೋಗುತ್ತವೆ ಎಂದರೆ ಹೌದು. ಅಪಘಾತವಾದ ಸಮಯದಲ್ಲಿ ನನ್ನ ಯಜಮಾನರು ರಸ್ತೆಯ ಎಡಭಾಗದಲ್ಲಿ ವಾಹನ ಚಾಲನೆ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ನನ್ನ ಯಜಮಾನರು ರಸ್ತೆಯ ಎಡಭಾಗದಿಂದ ಯೂ ಟರ್ನ್ ತೆಗೆದುಕೊಳ್ಳಲು ವಾಹನವನ್ನು ತಿರುಗಿಸುತ್ತಿದ್ದಾಗ ಅವರೇ ಗಾಬರಿಯಿಂದ ಕೆಳಗೆ ಬಿದ್ದಿದ್ದಾರೆಂದರೆ ಗೊತ್ತಿಲ್ಲ. ನನ್ನ ಯಜಮಾನರನ್ನು ಉಳಿಸಿಕೊಳ್ಳಲು ಹೋಗಿ ಬಸ್ಸಿನ ಚಾಲಕ ಬಸ್ಸನ್ನು ಬಲಗಡೆಗೆ ತಿರುಗಿಸಿ ಸಡನ್ ಬ್ರೇಕ್ ಅನ್ನು ಹಾಕಿದಾಗ ಬಸ್ಸು ಇನ್ನೊಂದು ಬದಿಗೆ ವಾಲಿದೆ ಆಗ ಮಾರುತಿ ಕಾರು ಸದರಿ ಬಸ್ಸಿಗೆ ಡಿಕ್ಕಿ ಪಡಿಸಿರುತ್ತದೆ ಎಂದರೆ ಗೊತ್ತಿಲ್ಲ. ಈ ಅಪಘಾತ ನನ್ನ ಯಜಮಾನರ ತಪ್ಪಿನಿಂದ ಆಗಿದೆ ಎಂದರೆ ಸರಿಯಲ್ಲ. ನನ್ನ ಯಜಮಾನರ ಕಾರ್ಯಕ್ಕೆ 3 ಲಕ್ಷ ರೂಪಾಯಿ ಖರ್ಚು

ಮಾಡಿದ್ದ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರು ಪಡಿಸಿಲ್ಲ. ನಾನು ಈ ರೀತಿಯಾದ 3 ಲಕ್ಷ ರೂಪಾಯಿ ಹಣವನ್ನು ಖರ್ಚು ಮಾಡಿಲ್ಲ ನಾನು ಸುಳ್ಳು ರೀತಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮಗೆ ಜಮೀನು ಇಲ್ಲ ನನ್ನ ಮಾವನ ಹೆಸರಿನಲ್ಲಿ ಜಮೀನು ಇದೆ. ನನ್ನ ಯಜಮಾನರಿಗೆ ದಿನಸಿ ಅಂಗಡಿಯಿಂದ ಎಷ್ಟು ಸಂಪಾದನೆ ಇತ್ತು ಎನ್ನುವ ಬಗ್ಗೆ ದಾಖಲೆ ಇಲ್ಲ. ನನ್ನ ಯಜಮಾನರು ಹಲಗೂರಿನ ದಿನಸಿ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದರು ಯಾರ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ನನ್ನ ಯಜಮಾನರು ಯಾವುದೇ ಕೆಲಸ ಮಾಡುತ್ತಿರಲಿಲ್ಲ ಪರಿಹಾರ ಪಡೆಯುವ ಸಲುವಾಗಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ದಿನ ನನ್ನ ಯಜಮಾನರು ಪುಟ್ಟಪ್ಪನದೊಡ್ಡಿ ಗ್ರಾಮದಲ್ಲಿ ಒಂದು ಕಾರ್ಯಕ್ರಮಕ್ಕೆ ಹೋಗುತ್ತಿದ್ದರು. ನನ್ನ ಯಜಮಾನರಿಗೆ ಮದ್ಯಪಾನ ಮಾಡುವ ಅಭ್ಯಾಸ ಇರಲಿಲ್ಲ. ನನ್ನ ಯಜಮಾನರು ಮದ್ಯಪಾನ ಮಾಡಿ ವಾಹನವನ್ನು ಸರಿಯಾಗಿ ಚಾಲನೆ ಮಾಡದೇ ಅಪಘಾತ ಪಡಿಸಿಕೊಂಡಿರುತ್ತಾರೆಂದರೆ ಸರಿಯಲ್ಲ. ಈ ಅಪಘಾತ ಕೆ ಎಸ್ ಆರ್ ಟಿ ಸಿ ಬಸ್ಸಿನ ಚಾಲಕನ ತಪ್ಪಿನಿಂದ ಆಗದೇ ಇರುವುದರಿಂದ ನನಗೆ ಯಾವುದೇ ರೀತಿಯಲ್ಲಿ ಪರಿಹಾರ ಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ.ಹೇ.ಕೇ.ಸ.ಒ

ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.